> ಚಾರುದತ್ತರು ಪ್ರಕೃತಿಯನ್ನೂ, ಕಾಮವನ್ನೂ, ಸೌಂದರ್ಯವನ್ನೂ ಎಲ್ಲವನ್ನೂ ಮರೆತು ಪಕ್ಕಾ ಕಾಫೀ ಬೆಳೆಗಾರರಂತೆ ಕಾಫಿಯ ಮಳೆಯ ಮಣ್ಣಿನ ಪರಿಮಳದಲ್ಲಿ ಕಳೆದುಹೋಗುತ್ತಾರೆ.

ಅಡ್ಡ ಹೆಸರಿಟ್ಟಿದ್ದರು. ಆದರೆ, ಶೇಷಪ್ಪನವರು ಆ ಶೀಷೆಗಳನ್ನು ತಮ್ಮ ಮಲಗುವ ಕೋಣೆಯಲ್ಲಿ ಇಷ್ಟು ವರ್ಣರಂಜಿತವಾಗಿ ಜೋಡಿಸಿರುವುದು ಅತಿಶಯವಾಗಿ ಕಾಣಿಸುತ್ತಿತ್ತು. ಆ ಕತ್ತಲು ತುಂಬಿದ ಕೋಣೆಯ ಮಂದ ಬೆಳಕು, ಒಂದು ಮೂಲೆಯಲ್ಲಿ ಉರಿಯುತ್ತಿದ್ದ ತಿಳಿನೀಲಬಣ್ಣದ ಟ್ಯೂಬು ಲೈಟು, ವಾರೆಯಾಗಿ ಬೆಳಕಿನ ಕಡೆ ತೆರೆದಿದ್ದ ಸಣ್ಣಕಿಟಕಿ, ಕೋಣೆಯ ತುಂಬ ಅಸ್ತವ್ಯಸ್ತವಾಗಿ ಹರಡಿದ್ದ ಅವರಿಬ್ಬರ ಉಡುಪುಗಳು, ಮುಳುಮುಳು ಅಳುತ್ತಿದ್ದ ಲೇಖಕಿ ವಿಲಾಸಿನಿ.

ಚಾರುದತ್ತರು ಬದುಕಿದ್ದರೆ ಇದಕ್ಕೊಂದು ಅದ್ಭುತ ವ್ಯಾಖ್ಯಾನವನ್ನೂ ತಮಾಷೆಯ ಉಪಸಂಹಾರವನ್ನೂ ಕೊಡುತ್ತಿದ್ದರು.

'ಬದುಕಲ್ಲಿ ಕೊನೆಗೂ ಸದ್ದುಮಾಡುವುದು ತಲೆಗೆ ಏರಿಸಿಕೊಂಡ ಕಿರೀಟದ ಬೇಗಡೆ ಮಾತ್ರ ಮಾರಾಯಾ' ಅನ್ನುತ್ತ ನಗುತ್ತಿದ್ದರು.

'ಚಾರುದತ್ತರ ಕೊನೆಯ ಕಾಲದಲ್ಲಿ ಅವರ ಆತ್ಮೀಯ ಒಡನಾಟದ ಸೌಭಾಗ್ಯ ದೊರೆತದ್ದು ನನ್ನ ಸುಕೃತಫಲ ಎಂದು ನೀವೆಲ್ಲರೂ ತಿಳಿದಿರಬಹುದು. ಹೌದು ನಿಜ. ಅದು ಒಂದು ರೀತಿಯಲ್ಲಿ ಸುಕೃತಫಲವೇ' ವಿಲಾಸಿನಿ ಫೇಸುಬುಕ್ಕಿನ ಮಾತಿನ ನಡುವೆ ಸಣ್ಣಗೊಂದು ವಿರಾಮ ಕೊಟ್ಟು ವಿಷಣ್ಣಳಾಗಿ ನಕ್ಕಿದ್ದಳು.

'ಅದಕ್ಕಿಂತಲೂ ಮಿಗಿಲಾದದ್ದನ್ನು ನಾನು ಹೇಳಲಿಕ್ಕಿದೆ. ಆದರೆ, ಅದು ಈಗ ಬೇಡ. ಅವರ ಆತ್ಮಚರಿತ್ರೆಯನ್ನು ಅವರ ಬಾಯಿಯಿಂದಲೇ ಕೇಳಿ ಬರೆಯುತ್ತಾ ಬರೆಯುತ್ತಾ ನನಗೆ ಒಂದು ದೊಡ್ಡ ಚಕ್ರವ್ಯೂಹದೊಳಗೆ ಹೊಕ್ಕಹಾಗೆ ಆಗಿದೆ. ಅದೂ ಈ ಹೊತ್ತಲ್ಲಿ ಬೇಡ. ಅವರ ಆತ್ಮಕ್ಕೆ ಶಾಂತಿ ಇರಲಿ. ನನ್ನ ಪುಸ್ತಕವೇ ಎಲ್ಲವನ್ನೂ ಹೇಳಲಿದೆ' ಅವಳು ಅಳು ತಡೆಯಲಾರದೇ ಪುನಃ ಮೂಗು ಒರೆಸಿಕೊಳ್ಳುತ್ತಿದ್ದಳು.

'ಎಂತ ಚಕ್ರವ್ಯೂಹ, ಇವಳ ಮುಸುಂಡಿ' ಚಾರುದತ್ತರು ಬದುಕಿದ್ದರೆ ಹೀಗೇ ಅನ್ನುತ್ತಿದ್ದರು.

'ಚಾರುದತ್ತರ 'ರಕ್ತಚಂದನ' ಬರವಣಿಗೆಯ ಸಂದರ್ಭದಲ್ಲಿ ನಾನು ಏನೇನೋ ತ್ಯಾಗಗಳನ್ನು ಮಾಡಬೇಕಾಯಿತು. ವೈಯಕ್ತಿಕವಾಗಿಯೂ, ಮಾನಸಿಕವಾಗಿಯೂ ಶಾರೀರಿಕವಾಗಿಯೂ ತುಂಬ ಬೇಯಬೇಕಾಯಿತು. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರು ಅರ್ಧ ಬರೆದಿಟ್ಟಿದ್ದ 'ರಕ್ತಚಂದನ'ದ ಹಸ್ತಪ್ರತಿಯನ್ನು ಹುಡುಕುವ ಸಂದರ್ಭದಲ್ಲಿ ಬೆನ್ನಿಗೆ ಪೆಟ್ಟುಬಿದ್ದು ಹಾಸಿಗೆ ಹಿಡಿಯಬೇಕಾಗಿಯೂ ಬಂತು. ಆಗ ನನ್ನನ್ನು ಮಗುವಂತೆ ನೋಡಿದವರು ನನ್ನ ಪತಿ ದೇವರು' ಎಂದು ಗಂಡ ಶೇಷಪ್ಪನ ತೋಳುಗಳನ್ನು ಹಿಡಕೊಂಡು ಅತ್ತಳು.

'ಅವಳು ಬಂದದ್ದು 'ರಕ್ತಚಂದನ'ವನ್ನು ಕದಿಯಲು. ಅವನು ಬಂದದ್ದು ಖಾಲಿ ಶೀಷೆ ಒಯ್ಯಲು. ಈಗ ಇಬ್ಬರೂ ರಾಷ್ಟ್ರಮಟ್ಟದ ಕಲಾವಿದರು.'

ಚಾರುದತ್ತರು ಬದುಕಿದ್ದಿದ್ದರೆ ಗೊಣಗುತ್ತಿದ್ದರು.